# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ – ೪ಎ<br>Part – IVA | ಬೆಂಗಳೂರು, ಗುರುವಾರ, ೦೮, ಜನವರಿ, ೨೦೨೬(ಪುಷ್ಯ, ೧೮, ಶಕವರ್ಷ, ೧೯೪೭)<br>BENGALURU, THURSDAY, 08, JANUARY, 2026(PUSHYA , 18, SHAKAVARSHA, 1947) | ನಂ. ೨೪<br>No. 24 |


## ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

## ಅಧಿಸೂಚನೆ

**ಸಂಖ್ಯೆ: ಸಂವ್ಯಶಾಇ 97 ಶಾಸನ 2025, ಬೆಂಗಳೂರು, ದಿನಾಂಕ: 08.01.2026**

ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2025 ಇದಕ್ಕೆ 2026ರ ಜನವರಿ ತಿಂಗಳ 7ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2026ರ ಕರ್ನಾಟಕ ಅಧಿನಿಯಮ ಸಂಖ್ಯೆ:10 ಎಂಬುದಾಗಿ ಕರ್ನಾಟಕ ರಾಜ್ಯಪತ್ರದಲ್ಲಿ (ಭಾಗ IV-A) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

## 2026ರ ಕರ್ನಾಟಕ ಅಧಿನಿಯಮ ಸಂಖ್ಯೆ: 10

**(2026ರ ಜನವರಿ ತಿಂಗಳ 8ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)**

## ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2025

**(2026ರ ಜನವರಿ ತಿಂಗಳ 7ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)**

ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ ಅಧಿನಿಯಮ, 2022ನ್ನು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ ಅಧಿನಿಯಮ, 2022 (2023ರ ಕರ್ನಾಟಕ ಅಧಿನಿಯಮ 06)ನ್ನು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪ್ರಕರಣ 2ರ ತಿದ್ದುಪಡಿ.-** ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ ಅಧಿನಿಯಮ, 2022 (2023ರ ಕರ್ನಾಟಕ ಅಧಿನಿಯಮ 06)ರ (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ), 2ನೇ ಪ್ರಕರಣದ, (ಸಿಸಿ) ಖಂಡದಲ್ಲಿ, "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿನಿಯಮ, 2020 (2020ರ ಕರ್ನಾಟಕ ಅಧಿನಿಯಮ 53)ರಲ್ಲಿ ಪರಿಭಾಷಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು" ಎಂಬ ಪದಗಳು, ಅಂಕಗಳು ಮತ್ತು ಆವರಣ ಚಿಹ್ನೆಗಳ ಬದಲಾಗಿ "ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024 (2025ರ ಕರ್ನಾಟಕ ಅಧಿನಿಯಮ 36) ರಲ್ಲಿ ಪರಿಭಾಷಿಸಿದಂತೆ ಗ್ರೇಟರ್ ಬೆಂಗಳೂರು ಪ್ರಾಧಿಕಾರವನ್ನು" ಎಂಬ ಪದಗಳು, ಅಂಕಗಳು ಮತ್ತು ಆವರಣ ಚಿಹ್ನೆಗಳನ್ನು ಪ್ರತಿಯೋಜಿಸತಕ್ಕದ್ದು.

**3. ಪ್ರಕರಣ 4ರ ತಿದ್ದುಪಡಿ.-** ಮೂಲ ಅಧಿನಿಯಮದ, 4ನೇ ಪ್ರಕರಣದ, (1)ನೇ ಉಪಪ್ರಕರಣದಲ್ಲಿರುವ ಪಟ್ಟಿಯಲ್ಲಿ,-

(i) ಖಂಡ (ಜೆ) ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ಬದಲಾಗಿ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"

| | | |
|---|---|---|
| (ಜೆ) | ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯೊಳಗಿನ ನಗರ ಪಾಲಿಕೆಗಳ ಮಹಾಪೌರರು | ಪದನಿಮಿತ್ತ ಸದಸ್ಯರು |

"

(ii) ಖಂಡ (ಎನ್) ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ಬದಲಾಗಿ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"

| | | |
|---|---|---|
| (ಎನ್) | ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯೊಳಗಿನ ನಗರ ಪಾಲಿಕೆಗಳ ಆಯುಕ್ತರು | ಪದನಿಮಿತ್ತ ಸದಸ್ಯರು |

"

(iii) ಹಾಗೆ ಪ್ರತಿಯೋಜಿಸಿದ ಖಂಡ (ಎನ್) ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"

| | | |
|---|---|---|
| (ಎನ್-1) | ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ನಗರ ಯೋಜಕರು; | ಪದನಿಮಿತ್ತ ಸದಸ್ಯರು |
| (ಎನ್-2) | ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯೊಳಗಿನ ನಗರ ಪಾಲಿಕೆಗಳ ಅಪರ ಮುಖ್ಯ ನಗರ ಯೋಜಕರು | ಪದನಿಮಿತ್ತ ಸದಸ್ಯರು |

"

**4. ಪ್ರಕರಣ 12ರ ತಿದ್ದುಪಡಿ.-** ಮೂಲ ಅಧಿನಿಯಮದ, 12ನೇ ಪ್ರಕರಣದ, (1)ನೇ ಉಪಪ್ರಕರಣದಲ್ಲಿರುವ ಪಟ್ಟಿಯಲ್ಲಿ,-

(i) ಖಂಡ (ಸಿ)ರ ಬದಲಾಗಿ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"

| | | |
|---|---|---|
| (ಸಿ) | ಮುಖ್ಯ ಆಯುಕ್ತರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ | ಪದನಿಮಿತ್ತ ಸದಸ್ಯರು |

"

(ii) ಹಾಗೆ ಪ್ರತಿಯೋಜಿಸಿದ ಖಂಡ (ಸಿ) ತರುವಾಯ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"

| | | |
|---|---|---|
| (ಸಿ-1) | ಮುಖ್ಯ ನಗರ ಯೋಜಕರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ | ಪದನಿಮಿತ್ತ ಸದಸ್ಯ |
| (ಸಿ-2) | ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯೊಳಗಿನ ನಗರ ಪಾಲಿಕೆಗಳ ಆಯುಕ್ತರು | ಪದನಿಮಿತ್ತ ಸದಸ್ಯರು |
| (ಸಿ-3) | ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯೊಳಗಿನ ನಗರ ಪಾಲಿಕೆಗಳ ಅಪರ ಮುಖ್ಯ ನಗರ ಯೋಜಕರು | ಪದನಿಮಿತ್ತ ಸದಸ್ಯರು |

"

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ. ಶ್ರೀಧರ್**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

**DEPARTMENT OF PARLIAMENTARY AFFAIRS AND LEGISLATION SECRETARIAT**

**NOTIFICATION**

**NO: DPAL 97 SHASANA 2025, BENGALURU, DATED:08.01.2026**

ಭಾರತ ಸಂವಿಧಾನದ ಅನುಚ್ಛೇದ 348ರಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2025 (2026ರ ಕರ್ನಾಟಕ ಅಧಿನಿಯಮ ಸಂಖ್ಯೆ: 10)ರ ಭಾಷಾಂತರವನ್ನು ಅಧಿಕೃತ ಆಂಗ್ಲ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದಲ್ಲಿ (ಭಾಗ IV-A) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

# KARNATAKA ACT NO. 10 OF 2026

(First published in the Karnataka Gazette Extra-ordinary on the 8th day of January, 2026)

## THE BENGALURU METROPOLITAN LAND TRANSPORT AUTHORITY (AMENDMENT) ACT, 2025

(Received the assent of the Governor on the 7th day of January, 2026)

An Act to amend the Bengaluru Metropolitan Land Transport Authority Act, 2022.

Whereas it is expedient to amend the Bengaluru Metropolitan Land Transport Authority Act, 2022 (Karnataka Act 06 of 2023) for the purposes hereinafter appearing:

Be it enacted by the Karnataka State Legislature in the seventy sixth year of the Republic of India as follows, namely:-

**1. Short title and commencement**.- (1) This Act may be called the Bengaluru Metropolitan Land Transport Authority (Amendment) Act, 2025.

(2) It shall come into force at once.

**2. Amendment of section 2.-** In the Bengaluru Metropolitan Land Transport Authority Act, 2022 (Karnataka Act 06 of 2023) (herein after referred to as the Principal Act), in section 2, in clause (cc), for the words, brackets and figures "Bruhath Bengaluru Mahanagara Palike as defined in the Bruhat Bengaluru Mahanagara Palike Act, 2020" (Karnataka Act 53 of 2020)", the words, brackets and figures "Greater Bengaluru Authority, as defined in the Greater Bengaluru Governance Act, 2024 (Karnataka Act 36 of 2025)" shall be substituted.

**3. Amendment of section 4.-** In the Principal Act, in section 4, in sub-section (1), in the table,-

(i) for clause (j) and the entries relating thereto, the following shall be substituted, namely:-

"

| | | |
|---|---|---|
| (j) | The Mayors of the City Corporations under the jurisdiction of the Greater Bengaluru Authority | Ex-Officio Members |

"

(ii) for clause (n) and the entries relating thereto, the following shall be substituted, namely:-

"

| | | |
|---|---|---|
| (n) | The Commissioners of the City Corporations under the jurisdiction of the Greater Bengaluru Authority | Ex-Officio Members |

"

(iii) after clause (n) as so substituted, the following shall be inserted, namely:-

"

| | | |
|---|---|---|
| (n-1) | The Chief Town Planner of the Greater Bengaluru Authority | Ex-Officio Member |
| (n-2) | The Additional Chief Town Planner of the City Corporations under the jurisdiction of the Greater Bengaluru Authority | Ex-Officio Members |

"

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



**4. Amendment of section 12.-** In the Principal Act, in section 12, in sub-section (1), in the table,-

(i) for clause (c), the following shall be substituted, namely:-

“

| | | |
|---|---|---|
| (c) | The Chief Commissioner, Greater Bengaluru Authority | Ex-Officio Member |

”

(ii) after clause (c) as so substituted, the following shall be inserted, namely:-

“

| | | |
|---|---|---|
| (c-1) | The Chief Town Planner, Greater Bengaluru Authority | Ex-Officio Member |
| (c-2) | The Commissioners of the City Corporations under the jurisdiction of the Greater Bengaluru Authority | Ex-Officio Members |
| (c-3) | The Additional Chief Town Planner of the City Corporations under the jurisdiction of the Greater Bengaluru Authority | Ex-Officio Members |

”

The above translation of ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2025 (2026ರ ಕರ್ನಾಟಕ ಅಧಿನಿಯಮ ಸಂಖ್ಯೆ: 10) be published in the official Gazette under Article 348 of the Constitution of India.

**THAAWARCHAND GEHLOT**
**GOVERNOR OF KARNATAKA**

By Order and in the name of
**the Governor of Karnataka,**

**G. Sridhar**
Secretary to Government
Department of Parliamentary Affairs
and Legislation

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH